





# ಮರದ ಮೋಹಕ ಕಿವಿಯೋಲೆ

ಧರಿಸಲು ಆರಾಮದಾಯಕವಾದ ಮರದ ಕಿವಿಯೋಲೆಗಳು ಫ್ಯಾಷನ್ ಟ್ರೆಂಡ್ ಸೃಷ್ಟಿಸಿದೆ. ಫ್ಯಾಷನ್‌ಗೂ ಸೈ, ಸಂಪ್ರದಾಯಕ್ಕೂ ಸಲ್ಲುವ ಇಂತಹ ಇಯರ್ ಹ್ಯಾಂಗಿಂಗ್‌ಗಳು ಮಹಿಳೆಯರ ಮೆಚ್ಚು ಕೂಡ ಆಗಿದೆ.

■ ಆಶಾ ಎಸ್. ಕುಲಕರ್ಣಿ

ಫ್ಯಾಷನ್ ಲೋಕದಲ್ಲಿ ಸಾಕಷ್ಟು ಬದಲಾವಣೆಗಳು ಆಗುತ್ತಲೇ ಇರುತ್ತವೆ. ಇಂದಿನ ಫ್ಯಾಷನ್ ನಾಳೆನೇ ಇರಲ್ಲ. ಹಾಗೆಯೇ ಹಳೆಯ ಫ್ಯಾಷನ್‌ಗಳು ಹೊಸ ರೂಪ, ಹೊಸ ವಿನ್ಯಾಸ ಪಡೆದು ಮತ್ತೆ ಮತ್ತೆ ಫ್ಯಾಷನ್ ಲೋಕಕ್ಕೆ ಎಂಟ್ರಿ ಕೊಡುತ್ತಲೇ ಇವೆ.

ಮಹಿಳೆಯರು ಆಭರಣ ಪ್ರಿಯರು ಎಂಬುದರಲ್ಲಿ ಎರಡು ಮಾತಿಲ್ಲ. ತಾವು ಧರಿಸುವ ಎಲ್ಲಾ ಆಕ್ಸೆಸರೀಸ್‌ಗಳಲ್ಲೂ ವರೈಟಿ ಇರಬೇಕೆಂದು ಬಯಸುವುದು ಸಹಜವೇ. ಅದರಲ್ಲೂ ಕಿವಿಯೋಲೆ, ಕಾಲ್ಗೆಜ್ಜೆ, ಬಿಂದಿ, ನೇಲ್‌ಪಾಲಿಷ್, ಉಡುಪು ಎಲ್ಲವನ್ನೂ ಮ್ಯಾಚ್ ಮಾಡಿ ನೋಡಿಯೇ ಧರಿಸುತ್ತಾರೆ. ಹೀಗಿರುವಾಗ ಇಂದಿನ ಯುವ ಪೀಳಿಗೆಯ ಯುವತಿಯರು ಟ್ರೆಂಡಿಂಗ್‌ನಲ್ಲಿ ಏನೇ ಇರಲಿ ಅದನ್ನೇ ಕೊಂಡು ಧರಿಸಲು ಇಷ್ಟಪಡುತ್ತಾರೆ. ಇವರೆಲ್ಲರ ಅಭಿರುಚಿಗೆ ತಕ್ಕಂತೆ ಇದೀಗ ಮರದ ಕಿವಿಯೋಲೆಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿದ್ದು ಇಂಥ ಯುವತಿಯರ ಹಾಟ್ ಫೇವರೆಟ್ ಲಿಸ್ಟ್‌ಗೆ ಸೇರಿಬಿಟ್ಟಿವೆ.

ಮರದ ಕಿವಿಯೋಲೆಗಳು ಧರಿಸಲು ಭಾರ ಇರಲ್ಲ, ಸಾಕಷ್ಟು ವರೈಟಿಗಳಲ್ಲಿ ಸಿಗುತ್ತವೆ ಹಾಗೂ ಕಡಿಮೆ ಬೆಲೆಗೆ ಮಾರುಕಟ್ಟೆಯಲ್ಲಿ ದೊರೆಯುತ್ತವೆ. ಹೀಗಿರುವಾಗ ಯುವ ಜನಾಂಗ ಇದರತ್ತ ಆಕರ್ಷಣೆಗೆ ಒಳಗಾಗಿರುವುದು ಆಶ್ಚರ್ಯವೇನಿಲ್ಲ.

ಹಿಂದಿನಿಂದಲೂ ಮರದ ಆಭರಣಗಳಿಗೆ ಎಲ್ಲಿಲ್ಲದ ಬೇಡಿಕೆ. ಅಲೆಮಾರಿಗಳು, ಕಾಡು